# ಪಾಠ-9, ಪರಲೋಕ

(2 ಅರಸು 2 ಮತ್ತು 13, ಮತ್ತಾಯ 17, ಪ್ರಕಟಣೆ 21)

**ಮೂಲ: ಬ್ರೂಸ್ ಎನ್. ಕ್ಯಾಮರಾನ್, ಅನುವಾದ: ಪಾಸ್ಟರ್ ಚೆಲುವರಾಜು**

## ಪೀಠಿಕೆ:

ನಿಮ್ಮ ಜೀವನದ ಧ್ಯೇಯೋದ್ದೇಶಗಳೇನು? ದುಡ್ಡು ಮಾಡುವುದೇ, ಗೌರವ ನಿರೀಕ್ಷಿಸುವದೇ, ಅಧಿಕಾರವೇ, ಪ್ರೀತಿಯೇ, ಯಶಸ್ಸೇ, ದೇವರೇ ಅಥವಾ ಇವೆಲ್ಲವೇ? ನಾನೇಕೆ ದೇವರನ್ನು ಮಾನವಾಭಿಲಾಷೆಯ ಪಟ್ಟಿಯಲ್ಲಿ ಸೇರಿಸಿದೆ? ಯಾಕೆಂದರೆ ದೇವರೂ ಸಹ ನಮ್ಮನ್ನು ಪ್ರಚೋದನೆಗೊಳಿಸುವ ವ್ಯವಹಾರದಲ್ಲಿದ್ದಾರೆ, ದೇವರು ನಮ್ಮನ್ನು ಪ್ರಚೋದಿಸುವ ಕಾರ್ಯಗಳಲ್ಲಿ, ಆತನಲ್ಲಿ ಪ್ರಾಮಾಣಿಕರಾಗಿ ನಡೆದುಕೊಂಡವರಿಗೆ ಪರಲೋಕದ ವಾಗ್ದಾನವೂ ಒಂದಾಗಿದೆ. ದೇವರ ಅಧಿಕಾರವನ್ನು ಕುರಿತಂತೆ, ಸೈತಾನನ ಮಂತ್ರಾಲೋಚನೆಗಳನ್ನು ಗಮನಿಸಿರಿ ಎಂದು ಕಳೆದವಾರ ನಾನು ನಿಮಗೆ ಹೇಳಿದ್ದೆ. ಪರಲೋಕದ ವಿಷಯಕ್ಕೆ ಬಂದಾಗ, ಸೈತಾನನ ಮಂತ್ರಾಲೋಚನೆಗಳನಿರಬಹುದು? ಪರಲೋಕ ಎಂಬುದು ಇಲ್ಲ ಎನ್ನುವುದಾದರೆ, ಪಾಪ ತುಂಬಾ ಸುಂದರವಾಗಿ ಕಾಣಿಸುತ್ತದೆಯಲ್ಲವೇ? ಬಹುಶ: ಮೊದಲ ನೋಟಕ್ಕೆ ಹಾಗೆ ಅನಿಸಬಹುದು. ಸತ್ಯವೇದ ಪರಲೋಕವನ್ನು ಕುರಿತು ಏನು ಹೇಳುತ್ತದೆಯೆಂದು ಸ್ವಲ್ಪ ಹೊತ್ತು ಆಳವಾಗಿ ಚಿಂತನೆಮಾಡೋಣ.

## I. ಎಲೀಯ, ಎಲೀಷ ಮತ್ತು ಪರಲೋಕ:

ಅ) 2 ಅರಸು 2:1 ಮತ್ತು 2 ಅರಸು 2:11-12 ನ್ನು ಓದಿಕೊಳ್ಳಿ. ಎಲೀಯನು ಸುತ್ತದ್ದು ಹೇಗೆ? (ಅವನು ಸಾಯಲಿಲ್ಲ!)

1) ಆತ ಎಲ್ಲಿಗೆ ಹೋದನು? (ಆತ ನೇರವಾಗಿ ಪರಲೋಕಕ್ಕೆ ಏರಿಹೋದನು).

2) ಈ ಎರಡು ವಾಕ್ಯಗಳಿಂದ ನಾವು ಪರಲೋಕವನ್ನು ಕುರಿತು ಕಲಿಯುವುದೇನು? (ಪರಲೋಕ ''ಮೇಲಿದೆ'' ಮತ್ತು ಅಲ್ಲಿಗೆ ಸಾರ್ವಜನಿಕ ಸಾರಿಗೆಯ ಅವಕಾಶವಿದೆ. ಇನ್ನೂ ಗಂಭೀರವಾಗಿ ಗಮನಿಸಬೇಕಾದ ವಿಷಯವೇನೆಂದರೆ ಅದು ಕಲ್ಪನೆಯ ರಾಜ್ಯವಲ್ಲ, ನಿಜವಾದ ಸತ್ಯವಾಗಿಯೂ ಇರುವ ಸ್ಥಳವಾಗಿದೆ ಮತ್ತು ಅಲ್ಲಿರುವವರು ಜೀವಂತವಾಗಿದ್ದಾರೆ.

೩) ಎಲೀಷನ ಪ್ರತಿಕ್ರಿಯೆಯನ್ನು ನೀವು ಹೇಗೆ ವರ್ಣಿಸುವಿರಿ? ನೀವು ನಿಮ್ಮ ಬಟ್ಟೆಗಳನ್ನು ಹರಿದುಕೊಂಡರೆ, ಅದರ ಅರ್ಥ: ನೀವು ಸಂತೋಷವಾಗಿಲ್ಲ ಎಂದಾಗುತ್ತದೆಯೇ? (ಎಲೀಷನು, ಎಲೀಷಯನನ್ನು ಕುರಿತು ''ಇಸ್ರಾಯೇಲ್ಯರಿಗೆ ರಥಾರಥಾಶ್ವಗಳಾಗಿದ್ದನೇ'' ಎಂದು ಹೇಳಿದ್ದಾನೆ. ಇಸ್ರಾಯೇಲ್ಯರಿಗೆ ( ಆ ಕಾಲದಲ್ಲಿ) ರಥಗಳು ಮತ್ತು ಕುದುರೆಯಾಳುಗಳೂ ಇದ್ದಿರಲಿಲ್ಲ. ಎಲೀಷ ಈ ಮಾತಿನ ಮೂಲಕ ಹೇಳುತ್ತಿರುವುದೇನೆಂದರೆ! ಎಲೀಯ ಇಸ್ರಾಯೇಲ್ಯರಿಗೆ ಶಕ್ತಿಯೋಪಾದಿಯಲ್ಲಿದ್ದನು. ಅಂಥಹವನು ಅವರನ್ನು ಬಿಟ್ಟು ಹೋಗುತ್ತಿರುವುದು, ತುಂಬಾ ದು:ಖವನ್ನುಂಟುಮಾಡಿತ್ತು).

ಆ) 2 ಅರಸು 13:21 ನ್ನು ಓದಿಕೊಳ್ಳಿ. ಎಲೀಷನು ಮರಣಿಸಿದಾಗ ಏನಾಯಿತು? ಆತನ ಗುರುವಾದ ಎಲೀಯನ ದಾರಿಯನ್ನೇ ಆತನು ಇಡಿದನೇ? (ಇಲ್ಲ ಆತನ ಮೂಳೆಗಳು ಸಮಾಧಿಯಲ್ಲಿದ್ದವು).

1) ಈ ವಾಕ್ಯದ ಪ್ರಕಾರ, ಎಲೀಷನು ಪರಲೋಕದಲ್ಲಿಲ್ಲ ಎನ್ನಬಹುದೇ? (ಎಲೀಯನ ದೇಹ ಪರಲೋಕದಲ್ಲಿ ಇರುವ ಹಾಗೆ, ಎಲೀಷನ ದೇಹ ಪರಲೋಕದಲ್ಲಿಲ್ಲ).

## II. ಮೋಶೆ ಮತ್ತು ಪರಲೋಕ:

ಅ) ಧ.ಕಾ. 34:5–7 ನ್ನು ಓದಿಕೊಳ್ಳಿ. ಮಹಾನ್ ಪುರುಷ ಮೋಶೆ ಮಡಿದಾಗ ಏನಾಯಿತು? (ದೇವರು ಆತನನ್ನು ಸಮಾಧಿಮಾಡಿದರು!).

1) ಮೋಶೆ ಮರಣಿಸಿದ ಮೇಲೆ ಪರಲೋಕಕ್ಕೆ ಏರಿಹೋದನೇ? (ಎಲೀಯನ ವಿಷಯದಲ್ಲಿ ದೇವರು ಆತನನ್ನು ಪರಲೋಕಕ್ಕೆ ಕರೆದುಕೊಂಡು ಹೋಗುವ ನಿರ್ಧಾರಮಾಡಿದ್ದರು, ಆದರೆ ಮೋಶೆಯ ವಿಷಯದಲ್ಲಿ, ದೇವರು ಆತನನ್ನು ಸಮಾಧಿಮಾಡಿದರೆಂದು ವಾಕ್ಯ ಹೇಳುತ್ತದೆ?

ಆ) ಯೂದ 1:9 ನ್ನು ಓದಿಕೊಳ್ಳಿ. ಯೂದನು ಇಲ್ಲಿ ಮಾತನಾಡುತ್ತಿರುವುದೇನು? (ಸಹಜವಾಗಿಯೇ, ಮೋಶೆಯು ಮರಣಿಸಿದನಂತರ, ಆತನದೇಹದವಿಷಯದಲ್ಲಿ ದೇವರಿಗೂ ಮತ್ತು ಸೈತಾನನಿಗೂ ವಾಗ್ವಾದ ಉಂಟಾಯಿತು. ಆ ವಾಗ್ವಾದದಲ್ಲಿ ದೇವರು, ಸೈತಾನನ್ನು ಖಂಡಿಸಿದರು).

1) ಅವರ ವಾಗ್ವಾದದ ವಿಷಯ ಏನಾಗಿತ್ತು? (ದೇವರಿಗೆ ಮೋಶೆಯ ದೇಹ ಬೇಕಾಗಿತ್ತು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಸೈತಾನನ ವಾಗ್ವಾದವೇನು, ನಾನು ಈ ಲೋಕದಾಧಿಪತಿ ಈದೇಹ ನನಗೆ ಸೇರಬೇಕು ಎಂಬುದಾಗಿರಬಹುದು).

ಇ) ಮತ್ತಾಯ 17:1–3 ನ್ನು ಓದಿಕೊಳ್ಳಿ. ಮೋಶೆಯ ದೇಹವನ್ನು ಕುರಿತ ವ್ಯಾಜ್ಯದಲ್ಲಿ ಯಾರು ಗೆದ್ದರು. (ನಿಸ್ಸಂದೇಹವಾಗಿ ದೇವರೇ!).

1) ದೇವರು ಮೋಶೆಯ ದೇಹವನ್ನು ಎಲ್ಲಿಗೆ ತೆಗೆದುಕೊಂಡು ಹೋದರು? (ಎಲೀಯನು ಪರಲೋಕಕ್ಕೆ ಏರಿಹೋದ್ದರಿಂದ, ಮೋಶೆಯನ್ನು ಅಲ್ಲಿಗೆ ಕರೆದುಕೊಂಡು ಹೋಗಲಾಯಿತು).

2) ಪರಲೋಕಕ್ಕೆ ಹೋಗುವ ತನಕ ಮೋಶೆ ಎಲ್ಲಿದ್ದನು? (ಕೆಲವು ಸಮಯದ ತನಕ ದೇವರು ಅವನನ್ನು ಸಮಾಧಿಮಾಡಿದ್ದರು).

## III. ಪರಲೋಕವನ್ನು ಕುರಿತು ಯೇಸುಸ್ವಾಮಿ:

ಅ) ಮತ್ತಾಯ 22:23–28 ನ್ನು ಓದಿಕೊಳ್ಳಿ. ಸದ್ದುಕಾಯರು ಪುನರುತ್ಥಾನದಲ್ಲಿ ನಂಬಿಕೆಯಿಲ್ಲದವರಾದ ಮೇಲೆ ಈ ಪ್ರಶ್ನೆಯನ್ನು ಕೇಳಿದ್ದು ಏಕೆ? (ಅದೊಂದು ಅಸಾಧ್ಯವಾದ ಆಲೋಚನೆ ಎಂಬುದನ್ನು ಅವರು ಸಿದ್ಧಾಂತ ಮಾಡಬೇಕಾಗಿತ್ತು).

ಆ) ಮತ್ತಾಯ 22:29–32 ನ್ನು ಓದಿಕೊಳ್ಳಿ. (ಭವಿಷ್ಯದಲ್ಲಿ ಪುನರುತ್ಥಾನವಿದೆ ಎಂಬ ವಿಷಯದಲ್ಲಿ ಯೇಸುಸ್ವಾಮಿ ಹೇಳುವುದೇನು?) ವಿಶ್ವಾಸಿಗಳಿಗೆ ದೇವರು ಹಾಕಿಕೊಂಡಿರುವ ಯೋಜನೆಯನ್ನು ಕುರಿತು ಯೇಸುಸ್ವಾಮಿಯವರು ಹೇಳುವುದೇನು? (ನಾವೆಲ್ಲರೂ ಪುನರುತ್ಥಾನಗೊಳ್ಳುತ್ತೇವೆ ಎಂಬ ಆಲೋಚನೆಯನ್ನು ಯೇಸುಸ್ವಾಮಿ ಪುರಸ್ಕರಿಸಿದ್ದಾರೆ. ಅವರು ತಮ್ಮ ಹೇಳಿಕೆಗೆ ಸತ್ಯವೇದ ಹಾಗೂ ದೇವರ ಶಕ್ತಿಯನ್ನು ಆಧಾರ ಮಾಡಿಕೊಂಡಿದ್ದಾರೆ).

ಇ) ನಾವು ಮೇಲಿನ ಸತ್ಯ ಘಟನೆಗಳಿಂದಲೂ ಮತ್ತು ಯೇಸುಸ್ವಾಮಿಯವರ ಹೇಳಿಕೆಗಳಿಂದಲೂ ಪರಲೋಕ ಎಂಬುದಿದೆ ಮತ್ತು ಮುಂದೆ ಪುನರುತ್ಥಾನ

ಸಹ ಇದೆಯೆಂಬುದನ್ನು ಕಲಿತುಕೊಂಡೆವು. ದೇವರಿಗೆ ನಿಮ್ಮ ಮೇಲಿರುವ ಆಸಕ್ತಿಯ ವಿಷಯದಲ್ಲಿ ಈ ವಿಷಯಗಳು ನಿಮಗೆ ಕಲಿಸಿಕೊಡುವುದೇನು? (ದೇವರಲ್ಲಿ ನಮ್ಮನ್ನು ಕಾಪಾಡುವ ಯೋಜನೆಯಿದೆ. ನಾವು ಆತನಿಗೆ ಪ್ರಾಮಾಣಿಕರಾಗಿ ನಡೆದುಕೊಂಡರೆ ಆ ಯೋಜನೆ ನಮ್ಮ ಜೀವಿತದಲ್ಲಿ ನೆರವೇರುತ್ತದೆ. ಆಗ ನಾವು ಸದಾಕಾಲ ಆತನ್ನೊಂದಿಗಿರಬಹುದು).

## IV. ಪರಲೋಕಕ್ಕೆ ಯಾವಾಗ?

ಅ) ಒಬ್ಬ ವಿಶ್ವಾಸಿ ಸತ್ತ ನಂತರ ಏನಾಗುತ್ತದೆ ಎಂಬ ವಿಷಯದಲ್ಲಿ ಅನೇಕ ಊಹಾಪೂಹಗಳೂ ಮತ್ತು ಸಂದೇಹಗಳೂ ಜನರ ಮಧ್ಯದಲ್ಲುಂಟು. ಕೆಲವರು ಸತ್ತ ಮನುಷ್ಯನ ದೇಹ ಕುಳಿಯೊಳಗೆ ಕೊಳೆಯುತ್ತಿರುವಾಗ, ಆತನ ‘‘ಆತ್ಮ’’ ಮೇಲೇರಿ ಹೋಗುತ್ತದೆ ಎಂದು ನಂಬುತ್ತಾರೆ. ಮತ್ತೆಕೆಲವರು ಆತ್ಮ, ದೇಹದಿಂದ ಹೊರತಾದದ್ದು ಅಲ್ಲ, ಪುನರುತ್ಥಾನಗೊಳ್ಳುವ ತನ್ನ ದೇಹ ಮತ್ತು ಆತ್ಮ ಸಮಾಧಿಯಲ್ಲಿ ಪ್ರಜ್ಞಾರಹಿತವಾಗಿರುತ್ತವೆ ಎನ್ನುತ್ತಾರೆ. ಎಲೀಯ, ಇಲೀಷ ಮತ್ತು ಮೋಶೆಯ ಸತ್ಯಕಥೆಗಳು ಖಂಡಿತವಾಗಿ ನಮಗೆ ಕಲಿಸಿಕೊಡುವುದೇನು? (ಎಲೀಯನ ಘಟನೆಯಿಂದ, ದೇವರು, ನಾವು ಮರಣದ ರುಚಿನೋಡದ ಹಾಗೆಯೇ ನಮ್ಮನ್ನು ಪರಲೋಕಕ್ಕೆ ಏರಿಹೋಗಬಹುದು ಎಂಬುದನ್ನು ತಿಳಿದುಕೊಂಡೆವು, ಎಲೀಷನ ಜೀವನ ಚರಿತ್ರೆಯಿಂದ, ಸತ್ತ ಮನುಷ್ಯ ಸಮಾಧಿಯಲ್ಲಿ ಕೊಳೆತು, ಆತನ ಮೂಳೆಗಳು ಅಲ್ಲೇ ಇರುತ್ತವೆಯೆಂಬುದನ್ನು ಕಲಿತೆವು. ಮೋಶೆಯ ಜೀವನ ಚರಿತ್ರೆಯಿಂದ, ನಾವು ಸತ್ತ ನಂತರ ನಮ್ಮ ದೇಹಗಳು ಸಮಾಧಿ ಮಾಡಲ್ಪಡುತ್ತವೆ. ಎಲ್ಲರೂ ಪುನರುತ್ಥಾನಗೊಳ್ಳುವುದಕ್ಕೆ ಮುನ್ನವೇ ಯೇಸುಸ್ವಾಮಿ ನಮ್ಮನ್ನು ಜೀವಂತವಾಗಿ ಸಮಾಧಿಯಿಂದ ಏಳಿಸಬಲ್ಲನೆಂದು ಕಲಿತೆವು.

1) ನಮ್ಮಲ್ಲಿ ದೇಹವನ್ನು ಹೊರತು ಪ್ರತ್ಯೇಕ ಆತ್ಮವಿದೆಯೆಂಬುದರ ಬಗ್ಗೆ ಈ ಮೇಲಿನ ಘಟನೆಗಳು ಕಲಿಸುವುದೇನು? (ಅಂತಹ ಒಂದು ಆಲೋಚನೆಯನ್ನೇ ಅವು ನಿರಾಕರಿಸುತ್ತವೆ. ಎಲೀಯನ ದೇಹವನ್ನು ತೆಗೆದುಕೊಂಡು ಹೋದದ್ದು ಏಕೆ? ನಮ್ಮ ಆತ್ಮ ಪರಲೋಕಕ್ಕೆ ಏರಿ

ಹೋಗುವುದಾದರೆ, ಮೋಶೆಯ ದೇಹದ ವಿಷಯದಲ್ಲಿ ದೇವರಿಗೂ ಸೈತಾನನಿಗೂ ವ್ಯಾಜ್ಯವೇಕೆ ನಡೆಯಬೇಕಾಗಿತ್ತು? ದೇವರು ಇಬ್ಬರು ಪ್ರಾಮುಖ್ಯರಾದವರ ದೇಹವನ್ನು ಪರಲೋಕಕ್ಕೆ ಕೊಂಡೊಯ್ಯುವ ಮೂಲಕ, ಪರಲೋಕದಲ್ಲಿ ನಾವು ದೇಹಸಹಿತರಾಗಿರುತ್ತೇವೆ ಎಂಬುದನ್ನು ತಿಳಿಸಿಕೊಟ್ಟಂತಾಯಿತು. ಹೀಗಾಗಿ ದೇವರು ನಮ್ಮ ದೇಹವನ್ನು ನಮ್ಮ ಜೀವಿತದ ಯಾವ ಸಮಯದಲ್ಲಾದರೂ ಅಥವಾ ನಾವು ಮರಣಿಸಿದ ನಂತರ ಪರಲೋಕಕ್ಕೆ ಕೊಂಡೊಯ್ಯುವರು ಆದರೆ ದೇವರು ನಮ್ಮನ್ನು ಸಂಪೂರ್ಣವಾಗಿ ಕೊಡೊಯ್ಯುವರು, ಏಕೆಂದರೆ ನಮ್ಮ ದೇಹಗಳು ಪರಲೋಕವನ್ನು ಸೇರುವುದು ಬಹುಮುಖ್ಯ).

## V. ನೀವು ಮತ್ತು ಪರಲೋಕ:

ಅ) ಹೀಗಾಗಿ, ನೀವು ನಿಮ್ಮ ದೇಹ ಸಮೇತರಾಗಿ ಪರಲೋಕದಲ್ಲಿರುವಿರಿ. ಅಲ್ಲೇನು ಮಾಡುವಿರಿ? ಅಲ್ಲಿ ಮನರಂಜನೆ ನೀಡುವ ಕೋಟಗಳಿವೆಯೇ? ಏರಳು ಮರಗಳಿವೆಯೇ? ಒಳ್ಳೊಳ್ಳೇ ಹೋಟೆಲುಗಳಿರಬಹುದೆ?

ಆ) ಪ್ರಕಟಣೆ 21:2–3 ನ್ನು ಓದಿಕೊಳ್ಳಿ. ಪರಲೋಕದಲ್ಲಿ ನಾವು ಮಾಡುವ ಮೊದಲ ಕೆಲಸಗಳೇನು? (ನಾವು ದೇವರೊಂದಿಗೆ ಅನ್ಯೋನ್ಯರಾಗಿರುತ್ತೇವೆ. ನಮ್ಮ ಕಲ್ಪನೆಯನ್ನು ಮೀರಿ ನಮ್ಮನ್ನು ಪ್ರೀತಿಸುವ ಸೃಷ್ಟಿಕರ್ತನೂ ಮತ್ತು ನಮ್ಮ ವಿಮೋಚಕನೂ ಆಗಿರುವಾತನ್ನೊಂದಿಗಿರುತ್ತೇವೆ.

ಇ) ಪ್ರಕಟಣೆ 21:5 ಮತ್ತು ಯೇಶಾಯ 65:17 ನ್ನು ಓದಿಕೊಳ್ಳಿ. ಹೊಸ ವಸ್ತುಗಳನ್ನು ನೀವು ಇಷ್ಟಪಡುವಿರಾ? (ಇಲ್ಲಿ ಎಲ್ಲವೂ ಹೊಸತು. ನೂತನ ಭೂಮಿ ಮತ್ತು ನೂತನ ಆಕಾಶ).

ಈ) ಪ್ರಕಟಣೆ 21:4 ನ್ನು ಓದಿಕೊಳ್ಳಿರಿ. ಪರಲೋಕದಲ್ಲಿ ನಿಮ್ಮ ಭಾವನಾತ್ಮಕ ಸ್ಥಿತಿ ಹೇಗಿರುತ್ತದೆ? (ನಾವು ದು:ಖಿಗಳಾಗಿರುವುದಿಲ್ಲ. ಅಲ್ಲಿ ನೋವಿಲ್ಲ; ಮರಣವಿಲ್ಲ. ವಯಸ್ಸಾಗಿ ಸಮಾಧಿ ಸೇರುವ ಕ್ರಮವಿಲ್ಲ).

ಉ) ಪ್ರಕಟಣೆ 21:10-11 ನ್ನು ಮತ್ತು ಪ್ರಕಟಣೆ 21:18-21 ನ್ನು ಓದಿಕೊಳ್ಳಿ. ಅತ್ಯಂತ ಮನೋಹರವಾದ ಅಲಂಕಾರಿಕ ಬೆಳ್ಳಿ ಬಂಗಾರದ ವಸ್ತುಗಳನ್ನು ಕಲ್ಪಿಸಿ ನೋಡಿರಿ. ಇದೇ ಪಟ್ಟಣ ಬೆಳ್ಳಿಬಂಗಾರದಿಂದ ಅಲಂಕರಿಸಲ್ಪಟ್ಟಿರುವುದನ್ನು ಕಲ್ಪಿಸಿನೋಡಿ. ಇದು ತಾನೇ ನಮ್ಮ ಭವಿಷ್ಯವಾಗಿದೆ!.

1) ದೇವರು ಹೊಸ ಯೆರೂಸಲೇಮನ್ನು ಆ ರೀತಿಯಾಗಿ ಅಲಂಕರಿಸುವುದೇಕೆ? (ಸ್ವ-ತ್ಯಾಗದ ಸಮಯ ಕಳೆದು ಹೋಯಿತು. ದೇವರು ನಮಗೆ ಭವ್ಯವಾದ ಸ್ಥಳವನ್ನು ಸೃಷ್ಟಿಸಿಕೊಡುತ್ತಾರೆಂದು ಇದು ನಮಗೆ ಸೂಚನೆ ನೀಡುತ್ತದೆ).

ಊ) ಪ್ರಕಟಣೆ 21:23-26 ನ್ನು ಓದಿಕೊಳ್ಳಿ. ನಮ್ಮ ನಿದ್ರೆಯ ರೀತಿ ಹಾಗೂ ಬೆಳಕಿನ ವ್ಯವಸ್ಥೆಯನ್ನು ಕುರಿತು ಇಲ್ಲಿ ಏನು ಹೇಳಲಾಗಿದೆ?

1) ‘‘ಭೂರಾಜರುಗಳು’’ ಮತ್ತು ‘‘ಜನಾಂಗಗಳ’’ ಕುರಿತ ಚರ್ಚೆ ನಮಗೆ ಸೂಚಿಸುವುದೇನು? (ನೂತನ ಭೂಮಿಯಲ್ಲಿಯೂ ಒಂದು ವ್ಯವಸ್ಥೆ ಇರುತ್ತದೆ).

ಋ) ಪ್ರಕಟಣೆ 22:1-3 ನ್ನು ಓದಿಕೊಳ್ಳಿ. ಈ ವಾಕ್ಯಗಳು ಅಲ್ಲಿರುವ ನೀರಿನ ಒರತೆಗಳು, ಹಸಿರಿನ ಮರಗಳು ಮತ್ತು ಭುಜಿಸುವ ಫಲಗಳ ವಿಷಯದಲ್ಲಿ ಏನು ಹೇಳುತ್ತದೆ? (ಇವೆಲ್ಲವೂ ಖಂಡಿತವಾಗಿ ಅಲ್ಲಿರುತ್ತದೆ).

1) ಆತ್ಮಸ್ವರೂಪದಲ್ಲಿ ನಾವಿರುವುದಾದರೆ ಈತಿನ್ನುವ ಮತ್ತು ಕುಡಿಯುವ ಆಲೋಚನೆ ಸೂಚಿಸುವುದೇನು? (ನಾವು ಆತ್ಮಸ್ವರೂಪದಲ್ಲಿ ಇರುವುದಿಲ್ಲ).

2) ಮತ್ತಿ ‘‘ಜನಾಂಗ’’ದ ಉಲ್ಲೇಖ ಈ ವಾಕ್ಯದಲ್ಲಿರುವುದನ್ನು ಗಮನಿಸಿ. ಈ ಹೊಸ ಯೆರೂಸಲೇಮಿನಲ್ಲಿ ನಮಗೆ ಗೊತ್ತಿರುವ ವಸ್ತುಗಳೇ ಇರುತ್ತವೆ, ಆದರೆ ಅವೆಲ್ಲಾ ತುಂಬಾ ಉತ್ತಮವಾಗಿರುತ್ತವೆ. ಈಎಲ್ಲಾ ಮಾಹಿತಿಗಳು ಪರಲೋಕವನ್ನು ಕುರಿತು ನಮಗೆ ಕಲಿಸಿಕೊಡುವುದೇನು? (ಅನೇಕ ರೀತಿಯಲ್ಲಿ ಅವೆಲ್ಲಾನಮಗೆ ಗೊತ್ತಿರುವ ಸಂಗತಿಗಳೇ ಆಗಿರುತ್ತವೆ).

ಋ) ‘‘ಪರಲೋಕ’’ ಎಂಬ, ರ್‍ಯಾಂಡಿ ಆಲ್‌ಕಾರ್ನ್ ರವರ ಪುಸ್ತಕವನ್ನು ನಾನು ಓದಿಕೊಂಡಿದ್ದೇನೆ. ದೇವರು ನೂತ ಯೆರೂಸಲೆಮನ್ನು ಭೂಮಿಗಿಳಿಸುವಾಗ, ಭೂಮಿಯ ಮೇಲೆ ಈಗ ಎಂಥಹ ಭೂಗೋಳ ರಚನೆಗಳಿರುತ್ತಿದೆಯೋ

ಅದೇ ರಚನೆಯನ್ನು ಉಳಿಸಿಕೊಂಡಿರುತ್ತಾರೆ ಎಂದು ರ್‍ಯಾಂಡಿ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ.

ಪ್ರಕಟಣೆ 21:1 ಸಮುದ್ರವು ಇನ್ನಿರುವುದಿಲ್ಲ ಎಂದು ಹೇಳಿದೆ. ಆದ್ದರಿಂದ ಈಗಿರುವುದಕ್ಕಿಂತ ಭೂಮಿಯ ಗಾತ್ರ ಇನ್ನೂ ಹೆಚ್ಚುತ್ತದೆ. ಹೀಗಾಗಿ ರ್‍ಯಾಂಡಿಯವರ ಅರ್ಥಗ್ರಹಿಕೆಯನ್ನು ನಂಬ ಬಹುದಾಗಿದೆ. ನಾನು ನೂತನ ಭೂಮಿಯಲ್ಲಿಯೂ ವರ್ಜಿನೀಯದಲ್ಲಿಯೇ ಇರಲು ಆಶೆಪಡುತ್ತೇನೆ. ನೀವು ಈಗ ಎಲ್ಲಿ ವಾಸಮಾಡುತ್ತಿದ್ದಿರೋ, ಅದೇ ಸ್ಥಳದಲ್ಲಿ ನೂತನ ಭೂಮಂಡಲದಲ್ಲಿಯೂ ವಾಸಿಸಲು ಇಷ್ಟಪಡುವಿರಾ? ನೀವು ಬಾಲ್ಯದಲ್ಲಿ ಎಲ್ಲಿ ಹುಟ್ಟಿ ಬೆಳೆದಿರೋ ಆ ಸ್ಥಳಗಳನ್ನು ಭೇಟಿ ಮಾಡಲು ಇಷ್ಟಪಡುವಿರಾ?

ಎ) ಯೋಹಾನ 14:2-3 ನ್ನು ಓದಿಕೊಳ್ಳಿ. ಆಹಾ ಇಲ್ಲ! ಪರಲೋಕದಲ್ಲಿ ನಾವು ಒಂದು ''ಕೊಠಡಿ''ಗಷ್ಟೇ ಸೀಮಿತರಾಗುತ್ತೇವೆಯೋ? (ಇಲ್ಲ ನಮ್ಮ ''ನೂತನ ಯೆರೂಪಸಲೇಮು'' ಬಯಲಿನಿಂದ ಕೂಡಿದ ಅಂತಸ್ತಿನಮನೆ. ಹೊಸ ಯೆರೂಸಲೇಮಿನಲ್ಲಿ ಸೀಮಿತ ಸ್ಥಳಾವಕಾಶ ಲಭ್ಯ. ಆಯೆರೋಸಲೇಮಿನಲ್ಲಿ ತೋಟದಿಂದಾವೃತವಾದ ಮನೆಯಿದೆ. ಮತ್ತು ನಾವು ಎಲ್ಲಿರುವುದಕ್ಕೆ ಬಯಸುತ್ತೇವೆಯೋ ಆ ಹಳ್ಳಿಗಾಡಿನ ಪ್ರದೇಶದಲ್ಲಿಯೂ ನಾವು ವಾಸ ಮಾಡಲು ಮನೆಗಳಿರುತ್ತವೆ).

1) ಯೇಶಾಯ 65:21-22 ನ್ನು ಓದಿಕೊಳ್ಳಿರಿ. ಹಳ್ಳಿಗಾಡಿನ ಮನೆಯನ್ನು ನಾನು ಮೇಲೆ ಉಲ್ಲೇಖ ಮಾಡಿದೆನಲ್ಲಾ ಅದನ್ನು ಕುರಿತು ತಾನೇ ಈ ವಾಕ್ಯ ಮಾತನಾಡುತ್ತಿರುವುದು? (ಈ ವಾಕ್ಯವನ್ನು ಹೇಗೆ ಅರ್ಥಮಾಡಿ ಕೊಳ್ಳಬೇಕೆಂದು ನನಗೆ ಗೊತ್ತಾಗುತ್ತಿಲ್ಲ. ಯೆಹೋದಿಗಳು ದೇವರಿಗೆ ವಿಧೇಯರಾಗಿ ನಡೆದುಕೊಂಡರೆ ಅವರಿಗೆ ಲಭ್ಯವಾಗುವ ಆಶೀರ್ವಾದವನ್ನು ಕುರಿತು ಈ ವಾಕ್ಯ ಮಾತನಾಡುತ್ತಿದೆ ಎನಿಸುತ್ತದೆ. ಕೆಲವು ಪ್ರವಾದನೆಗಳು ಒಂದಕ್ಕಿಂತ ಹೆಚ್ಚಿನ ನೆರವೇರಿಕೆಗೆ ಸಂಬಂಧಪಟ್ಟಿರುತ್ತದೆ. ಹೀಗಾಗಿ ಈ ವಾಕ್ಯಗಳು ಪರಲೋಕವನ್ನು ಮಾತನಾಡುತ್ತಿವೆ ಎಂಬುದನ್ನು ನಾನು

ನಂಬುತ್ತೇನೆ. ನಮಗೆ ಏನು ಬೇಕು ಎಂಬುದರ ವಿಷಯದಲ್ಲಿ ದೇವರ ದೃಷ್ಟಿಯನ್ನು ನಾನು ಅರ್ಥಮಾಡಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದೇನೆ).

ಏ) ನನ್ನ ಸ್ನೇಹಿತನೇ, ಪರಲೋಕವೆಂಬ ಪರಿಪೂರ್ಣ ಸ್ಥಳದಲ್ಲಿ ಸದಾಕಾಲ ವಾಸಿಸಲು ನೀನು ಇಚ್ಛಿಸುವಿಯಾ? ಅದು ಸದಾ ನೆಮ್ಮದಿ ಕೊಡುವ ಸ್ಥಳವಾಗಿದೆ? ಮಿತಿಮೀರಿದ ಸೌಂದರ್ಯ ಅಲ್ಲದೆ? ದೇವರು ತನ್ನ ಜನರಿಗೆ ಪರಲೋಕವನ್ನು ನೂತನ ಯೆರೂಸಲೇಮನ್ನು ಮತ್ತು ನೂತನ ಭೂಮಂಡಲವನ್ನು ವಾಗ್ದಾನಮಾಡಿದ್ದಾರೆ. ನೀನು ಅಲ್ಲಿರಬಹುದು. ನೀನು ನಿನ್ನ ಪಾಪಗಳನ್ನು ದೇವರ ಮುಂದೆ ಅರಿಕೆಮಾಡಿಕೊಳ್ಳುವಿಯಾ? ನಿನ್ನ ಸ್ಥಳದಲ್ಲಿ ನಿನಗೆ ಬದಲು ಮರಣಿಸಿದ ಯೇಸುಸ್ವಾಮಿಯನ್ನು ನಿನ್ನ ರಕ್ಷಕನಾಗಿ ಅಂಗೀಕರಿಸಿಕೊಳ್ಳುವಿಯಾ? ಆ ಮಹಿಮೆಯ ಪುನರುತ್ಥಾನದ ದಿನದಂದು ನೂತನ ಜೀವನ ಆರಂಭಿಸಲು ಸಿದ್ಧನಾಗಿರುವಿಯಾ?

## VI. ಮುಂದಿನ ವಾರ: ಶಿಷ್ಯ ತ್ವ.